**ಓ.ಎಸ್.ನಂಬ್ರ: 273/2023** **ಪಿ.ಡಬ್ಲ್ಯೂ :1**

ದಿನಾಂಕಃ 04-01-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ ಶ್ರೀ ಟಿ.ಬಿ.ಎಸ್. ವಕೀಲರಿಂದ**

ದಾವಾ ಆಸ್ತಿ ಸರ್ವೇ ನಂಬ್ರ.63/2 ಎ ರಲ್ಲಿ 9.18 ಎಕರೆ ಖಾಲಿ ಜಾಗ. ನನ್ನ ಪ್ರಮಾಣ ಪತ್ರದಲ್ಲಿ ಮತ್ತು ಹೇಳಿಕೆಯಲ್ಲಿ ಸದರಿ ಸ್ಥಳದ ಅಂಶವನ್ನು ವಾದಿ ಆಕ್ರಮ ಮಾಡಿದ್ದಾರೆ ಎಂದು ಹೇಳಿರುವುದಿಲ್ಲ. ಮೇಲೆ ಹೇಳಿದ ಸ್ಥಳಕ್ಕೆ ತಾಗಿ ರಾಷ್ಟೀಯ ಹೆದ್ದಾರಿ ಇದೆ. ಅದನ್ನು ಹೊರತು ಪಡಿಸಿ ಬೇರೆ ರಸ್ತೆ ಇರುವುದಿಲ್ಲ. ನಾನು ಅರ್ಜಿ ನೀಡಿದ ನಂತರ ಸ್ಥಳ ತನಿಖೆ ಮಾಡಿರುವುದು ಗೊತ್ತಿಲ್ಲ. ನಿಪಿ 54 ಭಾವಚಿತ್ರದಲ್ಲಿರುವುದು ನಾನೇ. ನನ್ನ ಪಕ್ಕದಲ್ಲಿರುವುದು ಪಿ.ಡಿ.ಓ. ನಿಪಿ 56 ರಲ್ಲಿರುವ ವಿಮಲೇಶ್ವರ ಜ್ಯುವೆಲರಿ ಎಲ್ಲಿದೆ ಎಂದು ಗೊತ್ತಿಲ್ಲ. ಸರ್ವೇ ನಂಬ್ರ 63/2 ಎ ರ ಅಂಶವನ್ನು ವಾದಿಯರ ಹಿರಿಯರು 1964 ನೇ ಇಸವಿಯಲ್ಲಿ ಅತಿಕ್ರಮಣ ಮಾಡಿಕೊಂಡು ಮನೆ ಕಟ್ಟಿಕೊಂಡು, ಅಂಗಡಿ ಕೋಣೆಯನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಯಾವುದೇ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆಕ್ರಮಣ ಮಾಡಿದವರಿಗೆ ಗ್ರಾಮ ಪಂಚಾಯತ್ ರವರು ನೋಟಿಸು ನೀಡಿದ್ದಾರೆ ಎಂದು ಹೇಳಿದ್ದೇನೆ. ತುಂಬಾ ಜನರು ಅನಧಿಕೃತವಾಗಿ ಆಕ್ರಮಣ ಮಾಡಿಕೊಂಡಿದ್ದಾರೆ. ಸರ್ವೇ ನಂಬ್ರ 63/2 ಎ ರಲ್ಲಿ ಯಾರೂ ಕೂಡಾ ಅತಿಕ್ರಮಣ ಮಾಡಿಕೊಂಡಿರುವುದಿಲ್ಲ, ಸದರಿ ಸರ್ವೇ ನಂಬ್ರನ್ನು ಅತಿಕ್ರಮಣ ಮಾಡಿದ್ದಾರೆ ಎಂದು ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಅಧಿಕಾರಿಗಳು ಸ್ಥಳ ತನಿಖೆ ಮಾಡಿರುವುದು ನನ್ನ ಗಮನಕ್ಕೆ ಬಂದಿರುವುದಿಲ್ಲ. ಯಾವ ಸರ್ವೇ ನಂಬ್ರನಲ್ಲಿ ಸ್ಥಳ ತನಿಖೆ ಮಾಡಿದ್ದಾರೆ ಎಂದು ನೆನಪಿಲ್ಲ. ಸರ್ವೇ ನಂಬ್ರ 63/2 ಎ ರ ಯಾವುದೇ ಅಂಶವನ್ನು ಯಾರೂ ಕೂಡಾ ಆಕ್ರಮಣ ಮಾಡಿಕೊಂಡಿರುವುದಿಲ್ಲ ಮತ್ತು ವಾದಿ ಕೂಡಾ ಅತಿಕ್ರಮಣ ಮಾಡಿರುವುದಿಲ್ಲ ಎಂದು ಖಚಿತವಾಗಿ ನನಗೆ ಗೊತ್ತಿದೆ. ನಾನು ವೈಯಕ್ತಿಕವಾಗಿ ಯಾವುದೇ ದೂರನ್ನು ನೀಡಿರುವುದಿಲ್ಲ. ಸಂಘಟನೆಯಿಂದ ದೂರನ್ನು ನೀಡಿರಬಹುದು. ವಾದಿಯರು ಮನೆ ಕಟ್ಟಿರುವುದನ್ನು, ಅಂಗಡಿ ಕೋಣೆ ಕಟ್ಟಿಕೊಂಡಿರುವುದನ್ನು ಮತ್ತು ಸುಮಾರು 50 ಜನ ಸದರಿ ಸರ್ವೇ ನಂಬ್ರನ್ನು ಪ್ರತ್ಯೇಕ ಪ್ರತ್ಯೇಕವಾಗಿ ಅತಿಕ್ರಮಣ ಮಾಡಿರುವುದನ್ನು ನ್ಯಾಯಾಲಯದಿಂದ ಕಮೀಷನರು ನೇಮಕವಾಗಿ ವರದಿ ನೀಡುವ ಬಗ್ಗೆ ನನ್ನ ಆಕ್ಷೇಪ ಇದೆ. ಸದರಿ ಭೂಮಿಯನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಿಟ್ಟ ಕಾರಣ ತನಿಖೆ ಮಾಡಬಾರದು ಎಂದು ಸಾಕ್ಷಿಯು ಸ್ವತಃ ನುಡಿಯುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**